ಆಮೇಲೆ ಬಾಬಾ ಜೊತೆ ಅವರ ಭೇಟೀನೆ ಆಗ್ಲಿಲ್ಲ ಅಂತೇನೂ ಇಲ್ಲ. ಸ್ಕೂಲ್ ಗೇಟ್ ಎದುರಿಗೆ ದಿನಾ ನಿಂತಿರ್ತಿದ್ದ. ಅಮ್ಮನ ಕಣ್ಣು ತಪ್ಪಿಸಿ ಕೆಲವು ಸಲ ಹತ್ತಿರ ಬಂದು, “ನನ್ನ ಬಗ್ಗೆ ಯೋಚನೆ ಮಾಡ್ಬೇಡಿ, ಚೆನ್ನಾಗಿ ಓದಿ, ನಾನಂತೂ ಸ್ಕೂಲ್ ಫೈನಲ್‌ನಲ್ಲಿ ಇಡೀ ದೇಶಕ್ಕೆ ಎರಡನೆಯವನಾಗಿ ಬಂದಿದ್ದೆ. ನೀವೂ ಚೆನ್ನಾಗಿ ಓದಬೇಕು” ಅಂತಿದ್ದ.

ಮಾತನಾಡುವಾಗ ಬಾಬಾ ಸದಾ ರಾನಾನನ್ನೇ ನೋಡುತ್ತಿರುತ್ತಿದ್ದ. ಚಿಕ್ಕಮಗು ಅಂತ ತುಂಬಾ ಪ್ರೀತಿಯಿರಬಹುದು. ಅಥವಾ ತಾನು ಇಲ್ಲಿಯವರೆಗೆ ಮಾಡಲಾಗದಿರುವುದನ್ನು ಬಹುಶಃ ಮಗ ಸಾಧಿಸ್ತಾನೆ ಅಂದುಕೊಂಡಿರಬಹುದು. ರಾಕಾಗೆ ಸರಿಯಾಗಿ ಅರ್ಥ ಆಗಲಿಲ್ಲ. ಬಾಬಾ ಹೊರಟುಹೋದ ಮೇಲೆ ರಾನಾಗೆ ಬಾಬಾ ಇಲ್ಲ ಅನ್ನೋ ಭಾವ ಜಾಸ್ತಿಯಾಗತೊಡಗಿತು. ಆದರೆ, ರಾಕಾಗೇನೂ ಹಾಗನಿಸ್ತಾ ಇರಲಿಲ್ಲ. ಆದರೆ, ಅಕ್ಕತಮ್ಮ ಇಬ್ಬರಿಗೂ ಬಾಬಾ ಅಂದ್ರೆ ತುಂಬಾ ಪ್ರೀತಿ. ಬಾಬಾ ಒಂದಿಷ್ಟು ಮನೆಯ ಕಾಳಜಿ ಮಾಡಿದಿದ್ದರೆ ಇವತ್ತು ಇಂಥ ಸ್ಥಿತಿ ಬರ್ತಾ ಇರಲಿಲ್ಲ. ಜೀವನ ಬೇರೆ ರೀತಿ ಇರ್ತಾ ಇತ್ತು. ಯಾರಿಗೂ ಹೇಳಿಕೊಳ್ಳಲಾಗದ ಈ ದುಃಖದಿಂದ ಒದ್ದಾಡ್ತಾ ಇರಬೇಕಾಗಿರಲಿಲ್ಲ. ರಾನಾ ಕೂಡ ಸ್ಕೂಲಲ್ಲಿ ಎಲ್ಲರ ಥರ ಸಹಜವಾಗಿ ಇರ್ತಾ ಇದ್ದ ಅವಳ ಭಾವನೆಯ ತಂತು ಕತ್ತರಿಸಿತು. ಪಕ್ಕದ ರೂಮಿನಲ್ಲಿ ನಿದ್ದೆಯಿಂದ ಎದ್ದ ಅಮ್ಮ, “ಚೂರ್ಣಿಯಮ್ಮ ಚಾ ತಗೊಂಡು ಬಾ” ಅಂತ ಅಡುಗೆಯವಳನ್ನು ಕರೆದರು.



ರಾಕಾಳ ಎದೆ ಢವಢವ ಹೊಡೆದುಕೊಳ್ಳತೊಡಗಿತು. ಈಗ ಏನಾಗುತ್ತೆ? ರಾನಾ ಬೇರೆ ಇನ್ನೂ ಬಂದಿಲ್ಲ.

ಭಾನುವಾರ ರಜದ ದಿನ ಎಲ್ಲಾ ಚಟುವಟಿಕೆಗಳು ಅವಳಿಗೆ ಬಾಯಿಪಾಠವಾಗಿದ್ದವು. ಬೆಡ್ ಚಾ ಕುಡಿದು ಅಮ್ಮ ನೇರವಾಗಿ ನಮ್ಮ ರೂಮಿಗೆ ಬರ್ತಾಳೆ. ಒಂದೆರಡು ಮಾತಾಡಿ ಅವಳ ಪ್ರೀತಿಯ ಗಿಡಗಳನ್ನು ನೋಡಲು ಹೋಗುತ್ತಾಳೆ. ಆಮೇಲೆ ಒಟ್ಟಿಗೆ ಕೂತು ತಿಂಡಿ ತಿಂತೀವಿ. ಒಂದಿಬ್ಬರು ಯಾರಾದರೂ ಗೆಸ್ಟ್ ಬರ್ತಾರೆ, ಅವರ ಜೊತೆ ಅಮ್ಮ, ಸೈಫುಲ್ ಅಂಕಲ್ ಮತ್ತೆ ಚಾ ಕುಡೀತಾರೆ. ಟಿ.ವಿ.ಯಲ್ಲಿ ಬೆಳಗಿನ ಕಾರ್ಯಕ್ರಮ ನಡೀತಾ ಇರುತ್ತೆ. ಆದರೆ ಇವತ್ತು, ಇನ್ನು ಸ್ವಲ್ಪ ಹೊತ್ತಿಗೆ ಬಿರುಗಾಳಿ ಏಳುತ್ತೆ.

ರಾಕಾ ನಡುಗುತ್ತಿದ್ದಳು. ಇತ್ತೀಚೆಗೆ ಅಮ್ಮ ಬದಲಾಗಿದ್ದಾಳೆ. ಎಲ್ಲದಕ್ಕೂ ಕೋಪ ಮಾಡಿಕೊಳ್ತಾಳೆ. ಅವಳ ಕೈಗಳೂ ಕಠೋರವಾಗಿವೆ. ಬಾಬಾ ಹೊರಟುಹೋದ ಮೇಲೆ ರಾನಾ ಕೂಡ ವಿಪರೀತ ಚೇಷ್ಟೆ